# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade - 2021)

**E-mail:** registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

**Website:** www.rcub.ac.in

**Phone No.:** 0831-2565234


---

ಸಂಖ್ಯೆ: ರಾಚವಿವಿ/ಕುಸಕಾ/ವಿದ್ಯಾಮಂಡಳ ವಿಭಾಗ/2021-22/ 2806          ದಿನಾಂಕ : 17 OCT 2021

## ಸುತ್ತೋಲೆ

**ವಿಷಯ: 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ (PG) ಮೂರನೇ ಸೆಮೆಸ್ಟರ್ ತರಗತಿಗಳನ್ನು ಪ್ರಾರಂಭಿಸಿ, ಪ್ರವೇಶವನ್ನು ಮುಂದುವರಿಸುವ ಕುರಿತು.**

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ರಾಣಿಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ ಹಾಗೂ ಸಂಯೋಜಕರು/ನಿರ್ದೇಶಕರು ಸ್ನಾತಕೋತ್ತರ ಕೇಂದ್ರಗಳು ಅನುಭಾವ ಸಂಗಮ, ಬಾಗಲಕೋಟ, ಸ್ನಾತಕೋತ್ತರ ಕೇಂದ್ರ ವಚನ ಸಂಗಮ ತೊರವಿ, ವಿಜಯಪುರ ಮತ್ತು ಸ್ನಾತಕೋತ್ತರ ಕೇಂದ್ರ ಜಮಖಂಡಿ ಹಾಗೂ ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಬೆಳಗಾವಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸಗಳನ್ನು ನಡೆಸುತ್ತಿರುವ ಎಲ್ಲಾ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಮೂರನೇ ಸೆಮೆಸ್ಟರ್ ತರಗತಿಗಳನ್ನು ದಿನಾಂಕ:08-10–2021 ರಿಂದ ಪ್ರಾರಂಭಿಸಲು ಸೂಚಿಸಲಾಗಿದೆ.

ಮುಂದುವರೆದು, 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಮೂರನೇ ಸೆಮೆಸ್ಟರ್ ಪ್ರವೇಶ ಪ್ರಕ್ರಿಯೆಯನ್ನು ಈ ಕೆಳಗಿನ ದಿನಾಂಕಗಳ ಪ್ರಕಾರ ಮುಂದುವರಿಸಲು ಸೂಚಿಸಲಾಗಿದೆ.

| | ದಂಡ ರಹಿತ (Without Penalty) | ರೂ. 500/– ದಂಡ ಸಹಿತ (With Penalty) |
|---|---|---|
| ದಿನಾಂಕಗಳು | ದಿನಾಂಕ:08–10–2021 ರಿಂದ ದಿನಾಂಕ:13–10–2021ರ ವರೆಗೆ | ದಿನಾಂಕ:14–10–2021 ರಿಂದ ದಿನಾಂಕ:23–10–2021ರ ವರೆಗೆ |

ವಿದ್ಯಾರ್ಥಿಗಳು ಪ್ರವೇಶ ಮುಂದುವರಿಸುವಾಗ ಪ್ರವೇಶ ಅರ್ಜಿ ನಮೂನೆಯಲ್ಲಿ ಪೂರ್ಣ ವಿವರಗಳನ್ನು ಭರ್ತಿಮಾಡಬೇಕಾಗುತ್ತದೆ. ಆದ್ದರಿಂದ ಅರ್ಜಿ ನಮೂನೆಗಳನ್ನು ಪಡೆದುಕೊಳ್ಳಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ವಿದ್ಯಾರ್ಥಿಗಳಿಗೆ ಅರ್ಜಿ ನಮೂನೆ ಶುಲ್ಕ ರೂ.250/– ನಿಗದಿಪಡಿಸಿದ್ದು ಹಾಗೂ ಸಾಮಾನ್ಯ/ಓ.ಬಿ.ಸಿ. ವಿದ್ಯಾರ್ಥಿಗಳಿಗೆ ರೂ.500/–ಗಳನ್ನು ನಿಗದಿಪಡಿಸಲಾಗಿದೆ. ಈ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ (www.rcub.ac.in) ಲಭ್ಯವಿದ್ದು, ವಿದ್ಯಾರ್ಥಿಗಳು ಇಲ್ಲಿಂದ ಡೌನಲೋಡ ಮಾಡಿಕೊಂಡು ಅರ್ಜಿ ನಮೂನೆ ಶುಲ್ಕವನ್ನು ಹಾಗೂ ನವೀಕರಣ ಮತ್ತು ಇತರೆ ಶುಲ್ಕವನ್ನು ವಿಭಾಗವಾರು ಪ್ರತ್ಯೇಕವಾಗಿ ಚಲನ್ ಅಥವಾ ಡಿಡಿ ಮುಖಾಂತರ ಹಣಕಾಸು ಅಧಿಕಾರಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ವಿದ್ಯಾಸಂಗಮ, ಬೆಳಗಾವಿ ಇವರ ಹೆಸರಲ್ಲಿ ಪಾವತಿಸಿ ಲಗತ್ತಿಸಬೇಕಾಗುತ್ತದೆ. ಹಾಗೂ ಪ್ರವೇಶ ಮುಂದುವರಿಸಿದ ವಿದ್ಯಾರ್ಥಿಗಳ ಪ್ರತ್ಯೇಕ ಕೋರ್ಸವಾರು ಯಾದಿಯನ್ನು ಸಿದ್ಧಪಡಿಸಿಕೊಂಡು ಮೊದಲನೆ ಸೆಮೆಸ್ಟರ್ ವಿದ್ಯಾರ್ಥಿಗಳ ಯಾದಿಯನ್ನು ಸಲ್ಲಿಸುವ ಹಂತದಲ್ಲಿ ಮೂರನೆ ಸೆಮೆಸ್ಟರ ವಿದ್ಯಾರ್ಥಿಗಳ ಯಾದಿಯನ್ನು ಏಕಕಾಲದಲ್ಲಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಸಲ್ಲಿಸಲು ಕೋರಲಾಗಿದೆ.

ಕುಲಸಚಿವರು

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾ ಸಂಗಮ
ಬೆಳಗಾವಿ-೫೯೧೧೫೬, ಕರ್ನಾಟಕ

ಇವರಿಗೆ,

1. ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ನಿರ್ದೇಶಕರು/ ಸಂಯೋಜಕರು, ಸ್ನಾತಕೋತ್ತರ ಕೇಂದ್ರಗಳು ವಿಜಯಪುರ, ಬಾಗಲಕೋಟ ಹಾಗೂ ಜಮಖಂಡಿ, ರಾ.ಚ.ವಿ, ಬೆಳಗಾವಿ.
3. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮದರ್ಜೆಘಟಕ ಮಹಾವಿದ್ಯಾಲಯ, ಬೆಳಗಾವಿ.
4. ಪ್ರಾಚಾರ್ಯರು, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿನ ಸಂಯೋಜಿತ ಸ್ನಾತಕ ಮಹಾವಿದ್ಯಾಲಯಗಳು.
5. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ರಾಚವಿ, ಬೆಳಗಾವಿ ಇವರಿಗೆ ವೆಬ್‌ಸೈಟ್ ಪ್ರಕಟಣೆಗಾಗಿ.
6. ರಕ್ಷಾ ಪ್ರತಿ.

Scanned by CamScanner